# ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:14-07-2015ರ ನಡವಳಿಗಳು

## ವಿಷಯದ ಸಂಖ್ಯೆ : 120 / 2015-16

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂರ್ವ, ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ, ಮಹದೇವಪುರ ಮತ್ತು ದಾಸರಹಳ್ಳಿ ವಲಯಗಳ ಒಟ್ಟು 60 ವಾರ್ಡ್‌ಗಳಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ಸಾಗಾಣೆಗಾಗಿ ಹೊಸದಾಗಿ ವಾರ್ಡುವಾರು ಟೆಂಡರ್ ಕರೆಯುವ ಕುರಿತು.

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ, 1976 ರನ್ವಯ ಘನತ್ಯಾಜ್ಯ ನಿರ್ವಹಣೆಯು ನಗರ ಸ್ಥಳೀಯ ಸಂಸ್ಥೆಯ ಆದ್ಯ ಕರ್ತವ್ಯವಾಗಿರುತ್ತದೆ. ಘನತ್ಯಾಜ್ಯ ಸಂಗ್ರಹಣೆ ಮತ್ತು ಸಾಗಾಣಿಕೆಯ ಕಾರ್ಯವನ್ನು ಪಾಲಿಕೆಯು ಬಹುತೇಕ ಹೊರ ಗುತ್ತಿಗೆ ಆಧಾರದ ಮೇಲೆ ಪೌರಕಾರ್ಮಿಕರು ಮತ್ತು ವಾಹನಗಳ ಮೂಲಕ ನಿರ್ವಹಿಸುತ್ತಿದೆ. 2012ನೇ ಸಾಲಿನಲ್ಲಿ ಪಾಲಿಕೆಯ ಎಲ್ಲಾ 198 ವಾರ್ಡ್‌ಗಳಿಗೆ ಘನತ್ಯಾಜ್ಯ ಸಂಗ್ರಹಣೆ ಮತ್ತು ಸಾಗಾಣಿಕೆಗೆ ಟೆಂಡರ್ ಕರೆಯಲಾಗಿದ್ದು, ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ, ಮಹದೇವಪುರ, ಆರ್.ಆರ್ ನಗರ, ದಾಸರಹಳ್ಳಿ ಮತ್ತು ಯಲಹಂಕ ವಲಯಗಳಲ್ಲಿ ಒಟ್ಟು-198 ವಾರ್ಡ್‌ಗಳಲ್ಲಿ 93 ವಾರ್ಡ್‌ಗಳಿಗೆ ಬಿಡ್ಡುದಾರರು ಭಾಗವಹಿಸದೆ ಹಾಗು ನಿರ್ವಹಿಸದೆ ಇರುವ ಕಾರಣಗಳಿಂದ 2013ನೇ ಸಾಲಿನಲ್ಲಿ ಪಾಲಿಕೆ ವತಿಯಿಂದ ಸದರಿ ವಾರ್ಡ್‌ಗಳಿಗೆ ಮರು ಟೆಂಡರ್ ಕರೆಯಲಾಗಿತ್ತು. ಸದರಿ ಟೆಂಡರ್‌ಅನ್ನು ಕೆಲ ಗುತ್ತಿಗೆದಾರರು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ:32851/2013 ದಾವೇ ಹೂಡಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ಪಾಲಿಕೆಯು ಸಲ್ಲಿಸಿರುವ ವರದಿಯನ್ವಯ ಸದರಿ ದಾವೆಯನ್ನು ವಜಾ ಮಾಡಿ ಹೊಸದಾಗಿ ಟೆಂಡರ್‌ಅನ್ನು ಕರೆಯಲು ಅನುಮತಿ ನೀಡಲಾಯಿತು. ಪಾಲಿಕೆಯ ವಿಭಜನೆ ಮತ್ತು ವಾರ್ಡ್ ಸಿಮೀಕರಣದಿಂದ ಮತ್ತೆ ಘನತ್ಯಾಜ್ಯ ನಿರ್ವಹಣೆ ಟೆಂಡರ್ ಆಹ್ವಾನಿಸುವ ಕುರಿತು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿ ಈ ಕುರಿತು ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:10-04-2015ರಂದು ತುರ್ತಾಗಿ ವಾರ್ಡ್‌ವಾರು ಟೆಂಡರ್ ಆಹ್ವಾನಿಸಲು ಪಾಲಿಕೆಗೆ ನಿರ್ದೇಶಿಸಿರುತ್ತದೆ.

ಅದರಂತೆ, ಪಾಲಿಕೆಯ ಪೂರ್ವ, ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ, ಮಹದೇವಪುರ, ದಾಸರಹಳ್ಳಿ, ಆರ್.ಆರ್ ನಗರ ಮತ್ತು ಯಲಹಂಕ ವಲಯಗಳ 93 ವಾರ್ಡ್‌ಗಳೊಂದಿಗೆ ಕೆಲವೊಂದು ವಾರ್ಡ್‌ಗಳಲ್ಲಿ ಒಪ್ಪಂದದಂತೆ ನಿರ್ವಹಿಸದೇ ಇದ್ದುದರಿಂದ ಹಾಗೂ ಇನ್ನಿತರೆ ಕಾರಣಗಳಿಂದ ಒಟ್ಟು 119 ವಾರ್ಡ್‌ಗಳಿಗೆ ಘನತ್ಯಾಜ್ಯ ಸಂಗ್ರಹಣೆ ಮತ್ತು ಸಾಗಾಣೆಗಾಗಿ ಟೆಂಡರ್ ಕರೆಯಬೇಕಾಗಿದ್ದು, ವಾರ್ಡ್‌ವಾರು ಟೆಂಡರ್ ಮಾನದಂಡಗಳನ್ನು ರೂಪಿಸಲು, ಅಂದಾಜು ಪಟ್ಟಿ ಮತ್ತು ಟೆಂಡರ್ ದಸ್ತಾವೇಜುಗಳನ್ನು ತಯಾರಿಸಲು ಸಮಯಬೇಕಾಗಿರುವುದರಿಂದ ಮೊದಲ ಹಂತದಲ್ಲಿ ಅಂದಾಜು ಪಟ್ಟಿ ತಯಾರಿಸಲಾಗಿದ್ದ ಪೂರ್ವ, ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ, ಮಹದೇವಪುರ, ದಾಸರಹಳ್ಳಿ ಮತ್ತು ಯಲಹಂಕ ವಲಯಗಳ ಒಟ್ಟು 79 ವಾರ್ಡ್‌ಗಳಿಗೆ ದಿನಾಂಕ:23-06-2015 ರಂದು ಮಾನ್ಯ ಆಡಳಿತಗಾರರ ಅನುಮೋದನೆ ಪಡೆದು ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಆದರೆ ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ: ನಅಇ 413 ಎಂಎಎನ್‌ವೈ 2015, ದಿನಾಂಕ:24-06-2015 ರಲ್ಲಿ 35 ವಾರ್ಡ್‌ಗಳಿಗೆ ಸೀಮಿತಗೊಳಿಸಿ ಟೆಂಡರ್ ಕರೆಯಲು ಅನುಮೋದನೆ ನೀಡಲಾಗಿರುತ್ತದೆ.

119 ವಾರ್ಡ್‌ಗಳಲ್ಲಿ 35 ವಾರ್ಡ್‌ಗಳಿಗೆ ಈಗಾಗಲೇ ಟೆಂಡರ್ ಕರೆಯಲಾಗಿದ್ದು ಉಳಿದ 84 ವಾರ್ಡ್ ಗಳಲ್ಲಿ 60 ವಾರ್ಡ್‌ಗಳಿಗೆ ಅಂದಾಜು ಪಟ್ಟಿ ತಯಾರಿಸಲಾಗಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ಹಿಂದಿನ ಆದೇಶಗಳಲ್ಲಿ ಟೆಂಡರ್ ಆಹ್ವಾನಿಸುವ ಸಮಯದಲ್ಲಿ ಪಾಲಿಕೆಯು ಅನುಸರಿಸಬೇಕಾದ ಅಂಶಗಳ ಕುರಿತು ಕಾಲಕಾಲಕ್ಕೆ ನೀಡುತ್ತಿರುವ ನಿರ್ದೇಶನಗಳನ್ವಯ ಮತ್ತು ಪಾಲಿಕೆಯ ಪರಿಣಿತ ಸಮಿತಿಯ ನೀಡಿರುವ ಸಲಹೆಗಳ ಅನುಗುಣವಾಗಿ ಸಮರ್ಪಕವಾಗಿ ಘನತ್ಯಾಜ್ಯ ನಿರ್ವಹಣೆ ಸಲುವಾಗಿ ಈ ಕೆಳಕಂಡಂತೆ ಮಾರ್ಗದರ್ಶಿಗಳನ್ನು ಅಳವಡಿಸಿಕೊಳ್ಳಲಾಗಿರುತ್ತದೆ:-

............................2

1. ಪ್ಯಾಕೇಜ್ ಟೆಂಡರ್ ಬದಲಾಗಿ ವಾರ್ಡ್‌ವಾರು ಟೆಂಡರ್ ಕರೆಯುವುದು.
2. ಮೂಲದಲ್ಲೇ ತ್ಯಾಜ್ಯ ವಿಂಗಡಣೆಗೆ ಪ್ರೋತ್ಸಾಹಿಸುವುದು. ಗುತ್ತಿಗೆದಾರರಿಗೆ ಪಾವತಿಸುವ ಮೊತ್ತದಲ್ಲಿ ಭಾಗಶ: ಮೊತ್ತವನ್ನು ತ್ಯಾಜ್ಯ ವಿಂಗಡಣೆಯನ್ನು ಸಮರ್ಪಕವಾಗಿ ನಿರ್ವಹಿಸುವುದಕ್ಕೆ ಕಾಯ್ದಿರಿಸುವುದು.
3. ವಾರ್ಡ್‌ನಲ್ಲಿಯೇ ಒಣತ್ಯಾಜ್ಯ ಸಂಗ್ರಹಣ ಕೇಂದ್ರ ಮತ್ತು ಹಸಿತ್ಯಾಜ್ಯ ಸಂಸ್ಕರಣ ಮೂಲಕ ವಿಕೇಂದ್ರೀಕೃತ ತ್ಯಾಜ್ಯ ಸಂಸ್ಕರಣ ಘಟಕಕ್ಕೆ ಪ್ರೋತ್ಸಾಹಿಸುವುದು.
4. ತ್ಯಾಜ್ಯ ಸಂಗ್ರಹಣೆ ಮತ್ತು ಸಾಗಾಣಿಕೆಯ ಮೇಲ್ವಿಚಾರಣೆಗೆ ಮಾಹಿತಿ ತಂತ್ರಜ್ಞಾನದ ವ್ಯವಸ್ಥೆಗಳನ್ನು ಕಲ್ಪಿಸುವುದು.
5. ಮೂಲದಲ್ಲೇ ತ್ಯಾಜ್ಯ ವಿಂಗಡಣೆ ಖಾತ್ರಿಪಡಿಸಿಕೊಳ್ಳಲು ಆಯಾ ತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಗ್ರಹಣೆ ಮತ್ತು ಸಾಗಾಣಿಕೆ ಮಾಡಲು ಮಾನದಂಡಗಳನ್ನು ರೂಪಿಸುವುದು.
6. ಘನತ್ಯಾಜ್ಯವನ್ನು ಶೇಕಡ 100 ರಷ್ಟು ಸಂಸ್ಕರಿಸಿ ಭೂಭರ್ತಿ ಹೋಗುವ ತ್ಯಾಜ್ಯವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ವಲಯವಾರು ತ್ಯಾಜ್ಯ ವಿಂಗಡಣೆ ಸಂಸ್ಕರಣಾ ಘಟಕ ಸ್ಥಾಪಿಸುವುದಕ್ಕೆ ಒತ್ತು ನೀಡುವುದು.
7. ತ್ಯಾಜ್ಯ ಸಾಗಾಣಿಕೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಮೇಲೆ ತಿಳಿಸಿರುವ ಕ್ರಮಗಳಂತೆ ವಿಕೇಂದ್ರೀಕೃತ ವಲಯವಾರು ಘಟಕಗಳನ್ನು ಸ್ಥಾಪಿಸುವುದು.
8. ದೊಡ್ಡ ಪ್ರಮಾಣದ ತ್ಯಾಜ್ಯ ಉತ್ಪಾದಕರನ್ನು ಪ್ರತ್ಯೇಕಿಸಿ ಅವರ ತ್ಯಾಜ್ಯ ನಿರ್ವಹಣೆಗೆ ಅವರನ್ನೇ ನೇರ ಜವಾಬ್ದಾರರನ್ನಾಗಿಸುವುದು ಹಾಗೂ 'Polluter Pay Principle' ಅಳವಡಿಸುವುದು.

ಮೇಲ್ಕಂಡ ತತ್ವಗಳನ್ನು ಒಳಗೊಂಡಂತೆ ಪರಿಣಾಮಕಾರಿಯಾಗಿ ತ್ಯಾಜ್ಯ ನಿರ್ವಹಣೆ ಮಾಡುವ ನಿಟ್ಟಿನಲ್ಲಿ, ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಸಚಿವಾಲಯವು ಸೂಚಿಸಿರುವ ಸರ್ವಿಸ್ ಲೆವೆಲ್ ಬೆಂಚ್‌ಮಾರ್ಕ್‌ನಂತೆ, ಪ್ರಸ್ತುತ ಚಾಲನೆಯಲ್ಲಿರುವ ಘನತ್ಯಾಜ್ಯ ನಿರ್ವಹಣೆ ನಿಯಮ 2000ರಂತೆ, ಕರಡು ಘನತ್ಯಾಜ್ಯ ನಿರ್ವಹಣೆ ನಿಯಮ 2015 ರಂತೆ, ಮಾನ್ಯ ಉಚ್ಚ ನ್ಯಾಯಾಲಯದ ಹಾಗೂ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯಂತೆ ಟೆಂಡರ್ ಮಾನದಂಡಗಳನ್ನು ರೂಪಿಸಲು, ಅಂದಾಜು ಪಟ್ಟಿ ಮತ್ತು ಟೆಂಡರ್ ದಸ್ತಾವೇಜುಗಳನ್ನು ತಯಾರಿಸಲು ಪಾಲಿಕೆಯು ಕೆ.ಯು.ಐ.ಡಿ.ಎಫ್.ಸಿ. ಮುಖಾಂತರ ಮೆ॥ ಐಡೆಕ್ ಸಂಸ್ಥೆಯನ್ನು ನೇಮಿಸಲಾಗಿರುತ್ತದೆ. ಅಧ್ಯಯನ ನಡೆಸಿದ ನಂತರ ಮಾನದಂಡಗಳನ್ನು ಮಾರ್ಪಾಡು ಮಾಡಿ ತಯಾರಿಸಲಾಗಿದ್ದು, ಸದರಿ ಮಾನದಂಡಗಳನ್ನು ಪ್ರಸ್ತುತ ಪ್ರಸ್ತಾವನೆಯಲ್ಲಿ ಅಳವಡಿಸಿಕೊಳ್ಳಲಾಗಿದ್ದು, ಅಳವಡಿಸಿಕೊಂಡಿರುವ ಮಾನದಂಡಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.

ಟೆಂಡರ್ ಅಂದಾಜು ಪಟ್ಟಿಯನ್ನು ಜನಗಣತಿ ಮತ್ತು ವಾರ್ಡ್‌ವಾರು ಸಂಗ್ರಹಿಸಿರುವ ಮಾಹಿತಿಯನ್ವಯ ವಾರ್ಡ್‌ವಾರು ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ. ಅಂದಾಜುಪಟ್ಟಿ ತಯಾರಿಸಿರುವ ಸಮಯದಲ್ಲಿ ಈ ಕೆಳಕಂಡ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.

1. **<u>ಸಾಲಪ್ಪ ಸಮಿತಿ ವರದಿ ಶಿಫಾರಸ್ಸಿನಂತೆ</u>**

- ಪೌರಕಾರ್ಮಿಕರ ವೇತನ: ಕಾರ್ಮಿಕ ಇಲಾಖೆಯಿಂದ ನಿಗಧಿ ಪಡಿಸಿರುವ 2015-16ನೇ ಸಾಲಿನ ಕನಿಷ್ಠ ವೇತನವನ್ನು ಮತ್ತು ರಜೆಗಳನ್ನು ಅಳವಡಿಸಿಕೊಳ್ಳಲಾಗಿದೆ.
- ಪೌರಕಾರ್ಮಿಕರಿಗೆ ಸುಧಾರಿತ ಸಾಧನೆ, ಸಲಕರಣೆಗಳನ್ನು, ಸಮವಸ್ತ್ರ ಸುರಕ್ಷಿತ ಸಾಮಾನುಗಳನ್ನು ಅಳವಡಿಸಿಕೊಳ್ಳಲಾಗಿದೆ.
- ವಾಹನಗಳು: ಆಟೋ ಟಿಪ್ಪರ್. ಲಗೇಜ್ ಆಟೋ ಮತ್ತು ತಳ್ಳುವ ಗಾಡಿಗಳು
- ಪೌರಕಾರ್ಮಿಕರಿಗೆ ಶೌಚಾಲಯಗಳು, ಬಟ್ಟೆ ಬದಲಾಯಿಸಲು ಕೋಣೆಗಳಿಗೆ ಅವಕಾಶ ಕಲ್ಪಿಸಲಾಗಿದೆ.

.............................3

2. ಕೊಳಚೆ ಪ್ರದೇಶಗಳಲ್ಲಿ ದೊಡ್ಡ ತೊಟ್ಟಿಗಳನ್ನು ಅಳವಡಿಸಿಕೊಳ್ಳಲಾಗಿದೆ.
3. ದ್ವಿತಿಯ ಹಂತದ ಸಂಗ್ರಹಣೆಯಲ್ಲಿ ತೊಟ್ಟಿಗಳನ್ನು ಅಳವಡಿಸಿಕೊಳ್ಳಲಾಗಿದೆ.
4. ಅರಿವು ಮೂಡಿಸುವ ಸಲುವಾಗಿ ಮಾಹಿತಿ ಶಿಕ್ಷಣ ಮತ್ತು ಸಂಪರ್ಕ ಅಳವಡಿಸಿಕೊಳ್ಳಲಾಗಿದೆ.
5. ಕಳೆ ಕೀಳುವ ಯಂತ್ರಗಳನ್ನು ಅಳವಡಿಸಿಕೊಳ್ಳಲಾಗಿದೆ.
6. ಸೋಂಕು ತಡೆಗಟ್ಟಲು ಔಷಧಿ ಸಿಂಪಡಿಕೆ
7. ವಾಣಿಜ್ಯ ಪ್ರದೇಶಗಳಲ್ಲಿ ತೊಟ್ಟಿಗಳನ್ನು ಅಳವಡಿಸಿಕೊಳ್ಳಲಾಗಿದೆ.

ಮೇಲ್ಕಂಡ ಅಂಶಗಳನ್ನು ಅಳವಡಿಸಿಕೊಳ್ಳಲಾಗಿದ್ದು, ಅದರಂತೆ ಪಾಲಿಕೆಯ ಪೂರ್ವ, ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ, ಮಹದೇವಪುರ ಮತ್ತು ದಾಸರಹಳ್ಳಿ ವಲಯಗಳ ಒಟ್ಟು 60 ವಾರ್ಡ್‌ಗಳಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ಸಾಗಾಣೆಗಾಗಿ ಅಂದಾಜು ಪಟ್ಟಿಯ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ವಿವರಗಳು | ಒಟ್ಟು ಮಾಸಿಕ ಮೊತ್ತ (ಲಕ್ಷಗಳಲ್ಲಿ) |
|---|---|---|
| 1 | ಮಾಸಿಕ ಗುತ್ತಿಗೆ ಮೊತ್ತ | 1166.85 |
| 2. | ಹೆಚ್ಚುವರಿ ವಾಹನ ಮತ್ತು ಪೌರಕಾರ್ಮಿಕರನ್ನು ತುರ್ತು ಸಂದರ್ಭದಲ್ಲಿ ಒದಗಿಸಲು | 58.34 |
| 3. | ಶೌಚಾಲಯಗಳು, ಬಟ್ಟೆ ಬದಲಾಯಿಸುವ ಸ್ಥಳಗಳು, ತೊಟ್ಟಿಗಳು, ಅರಿವು ಮೂಡಿಸಲು, ಔಷಧಿ ಸಿಂಪಡಿಕೆ ಇತ್ಯಾದಿ | 124.35 |
| 4. | ಮೊದಲ ಬಾರಿ ವೆಚ್ಚ | 3.33 |
| 5. | ಒಟ್ಟು ಮಾಸಿಕ ಮೊತ್ತ | 1352.89 |
| 6. | ಒಟ್ಟು ವಾರ್ಷಿಕ ಮೊತ್ತ | 16235 |

ಮೇಲ್ಕಂಡ ಅಂಶಗಳನ್ನು ಅಳವಡಿಸಿಕೊಳ್ಳಲಾಗಿರುವುದರಿಂದ, ಸದರಿ ಮೊತ್ತವನ್ನು ಹಾಲಿ ನಿರ್ವಹಿಸುತ್ತಿರುವ ವೆಚ್ಚಕ್ಕೆ ಹೋಲಿಸಿದ್ದಲ್ಲಿ ಶೇ.47% ಹೆಚ್ಚುವರಿ ವೆಚ್ಚ ತಗುಲಬಹುದಾಗಿದೆ. ಪಾಲಿಕೆಯ ಪೂರ್ವ, ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ, ಮಹದೇವಪುರ ಮತ್ತು ದಾಸರಹಳ್ಳಿ ವಲಯಗಳ ಒಟ್ಟು 60 ವಾರ್ಡ್‌ಗಳಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ಸಾಗಾಣಿಕೆಗಾಗಿ ವಾರ್ಡ್‌ವಾರು ಅಂದಾಜು ಪಟ್ಟಿಯನ್ನು ಅನುಭಂಧ-2 ರಲ್ಲಿ ಲಗತ್ತಿಸಿದೆ.

ಸದರಿ ಟೆಂಡರ್‌ನಲ್ಲಿ ಅಳವಡಿಸಿರುವ ಕೆಲಸ ವ್ಯಾಪ್ತಿಯ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.

- ಮನೆಮನೆಗಳಿಂದ (ಕೊಳಚೆ ಪ್ರದೇಶಗಳ ಮನೆಗಳು ಒಳಗೊಂಡಂತೆಮತ್ತು ದೊಡ್ಡ ಪ್ರಮಾಣದ ತ್ಯಾಜ್ಯ ಉತ್ಪಾದಕರನ್ನು ಹೊರತು ಪಡಿಸಿ) ಪ್ರತ್ಯೇಕವಾಗಿ ಪ್ರತಿನಿತ್ಯ ಹಸಿತ್ಯಾಜ್ಯ ಸಂಗ್ರಹಣೆ, ದಿನ ಬಿಟ್ಟು ದಿನ ಒಣತ್ಯಾಜ್ಯ ಸಂಗ್ರಹಣೆ ಮಾಡುವುದು.
- ಹಸಿತ್ಯಾಜ್ಯವನ್ನು ಮತ್ತು ಒಣತ್ಯಾಜ್ಯವನ್ನು ನಿಗಧಿ ಪಡಿಸಿರುವ ವಾಹನಗಳಲ್ಲಿ ಸಂಗ್ರಹಿಸುವುದು ಮತ್ತು ನಿಧಿ ಪಡಿಸಿರುವ ಸ್ಥಳಗಳಿಗೆ ಸಾಗಿಸುವುದು.
- ಸ್ಯಾನಿಟರಿ ತ್ಯಾಜ್ಯವನ್ನು ಹಸಿತ್ಯಾಜ್ಯದೊಂದಿಗೆ ಪ್ರತಿನಿತ್ಯ ಸಂಗ್ರಹಿಸಿ ಪ್ರತ್ಯೇಕವಾಗಿ ಚೀಲಗಳಲ್ಲಿ ಸಾಗಾಣಿಕೆ ಮಾಡುವುದು.
- ರಸ್ತೆಗಳು, ಪಾದಚಾರಿ ರಸ್ತೆಗಳು, ಮೇಲ್‌ರಸ್ತೆಗಳು ಮತ್ತು ಸುರಂಗ ಮಾರ್ಗಗಳನ್ನು ಸ್ವಚ್ಛಗೊಳಿಸುವುದು.
- ಆಟದ ಮೈದಾನ, ಸ್ಮಶಾನಗಳು, ಉದ್ಯಾನವನಗಳು, ಸಾರ್ವಜನಿಕರ ಶೌಚಾಲಯಗಳನ್ನು ಮತ್ತು ಖಾಲಿ ನಿವೇಶನಗಳನ್ನು ಸ್ವಚ್ಛಗೊಳಿಸುವುದು.
- ಸತ್ತ ಪ್ರಾಣಿಗಳನ್ನು 4 ಗಂಟೆಗಳ ಅವಧಿಯೊಳಗೆ ಸಾಗಿಸುವುದು.
- ಸಾರ್ವಜನಿಕರ ದೂರುಗಳನ್ನು ನಿವಾರಿಸುವುದು.

..........................4

ಸದರಿ ಕೆಲಸ ವ್ಯಾಪಿಯೊಂದಿಗೆ ಇನ್ನಿತರ ಅಂಶಗಳನ್ನು ಒಳಗೊಂಡಂತೆ ಟೆಂಡರ್ ದಸ್ತಾವೇಜನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪರಾದರ್ಶಕತೆ ನಿಯಮಗಳು 2000 ರಂತೆ ತಯಾರಿಸಲಾಗಿರುತ್ತದೆ.

ಮೇಲ್ಕಂಡ ಟೆಂಡರ್‌ನ್ನು ಆಹ್ವಾನಿಸಿ ಮೌಲ್ಯಮಾಪನ ಮಾಡಲು ಮತ್ತು ಅಂಗೀಕರಿಸುವ ನಿಟ್ಟಿನಲ್ಲಿ ಈ ಕೆಳಕಂಡ ಅಧಿಕಾರಯುಕ್ತ ಸಮಿತಿಯನ್ನು ರಚಿಸಲಾಗಿದೆ.

| ಕ್ರಮ ಸಂಖ್ಯೆ | ವಿವರ | ಅಧಿಕಾರ |
|---|---|---|
| 1 | ಟೆಂಡರ್ ಅಹ್ವಾನಿಸುವ ಪ್ರಾಧಿಕಾರ | ಆಯಾ ವಲಯದ ವಿಭಾಗದ ಕಾರ್ಯಪಾಲಕ ಅಭಿಯಂತರರು |
| 2 | ಟೆಂಡರ್ ಮೌಲ್ಯಮಾಪನ | ವಲಯದ ಅಪರ/ಜಂಟಿ ಆಯುಕ್ತರು, ಮುಖ್ಯ ಅಭಿಯಂತರರು, ಅಧೀಕ್ಷಕ ಅಭಿಯಂತರರು, ಸಹಾಯಕ ಹಣಕಾಸು ನಿಯಂತ್ರಕರು ಮತ್ತು ಆಯಾ ವಿಭಾಗದ ಕಾರ್ಯಪಾಲಕ ಅಭಿಯಂತರನ್ನೊಳಗೊಂಡ ಸಮಿತಿ |
| 3 | ಟೆಂಡರ್ ಅಂಗೀಕಾರ | ಆಯುಕ್ತರು, ವಿಶೇಷ ಅಯುಕ್ತರು (ಘತ್ಯಾನಿ), ಜಂಟಿ ಆಯುಕ್ತರು (ಘತ್ಯಾನಿ), ಮುಖ್ಯ ಅಭಿಯಂತರರು (ಘತ್ಯಾನಿ) ಮತ್ತು ಆಯಾ ವಲಯದಅಪರ/ಜಂಟಿ ಆಯುಕ್ತರ-ನ್ನೊಳಗೊಂಡ ಸಮಿತಿ. |

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಈ ಕೆಳಕಂಡ ಅಂಶಗಳಿಗೆ ಹಾಗೂ ಸರ್ಕಾರದ ಅನುಮೋದನೆ ಪಡೆಯಲು ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:13-07-2015ರ ಟಿಪ್ಪಣಿ.

1. ತುರ್ತಾಗಿ ಪೂರ್ವ, ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ, ಮಹದೇವಪುರ ಮತ್ತು ದಾಸರಹಳ್ಳಿ ವಲಯಗಳ ಒಟ್ಟು 60 ವಾರ್ಡ್‌ಗಳಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ಸಾಗಾಣೆಕೆಗಾಗಿ ಮೂರು ವರ್ಷ ಅವಧಿಗೆ ವಾರ್ಡ್‌ವಾರು ಅಲ್ಪಾವಧಿ ಟೆಂಡರ್ ಕರೆಯಲು ಅನುಮೋದನೆ.
2. ಅನುಬಂಧ-1ರಂತೆ ಅಳವಡಿಸಿಕೊಂಡಿರುವ ಮಾನದಂಡಗಳಿಗೆ ಅನುಮೋದನೆ,
3. ಅನುಬಂಧ-2 ರಂತೆ ಅಂದಾಜಿಸಿರುವ ಅಂದಾಜುಪಟ್ಟಿಗೆ ಅನುಮೋದನೆ.
4. ಟೆಂಡರ್ ದಸ್ತಾವೇಜಿಗೆ ಅನುಮೋದನೆ.
5. ಕೋಷ್ಟಕದಂತೆ ರಚಿಸಲಾಗಿರುವ ಅಧಿಕಾರಯುಕ್ತ ಸಮಿತಿಗೆ ಅನುಮೋದನೆ.

<u>ತೀರ್ಮಾನ</u>: "ಅನುಮೋದಿಸಿದೆ".

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು